ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 18–04–2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಅಗ್ನಿಶಾಮಕ ಸೇವೆ, ಗೃಹರಕ್ಷಕ ದಳ ಹಾಗೂ ಪೌರರಕ್ಷಣೆಯ ಅಧಿಕಾರಿ ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ.<br><br>ಪದಕ ಪ್ರದಾನ:<br><br>ಡಾ. ಜಿ. ಪರಮೇಶ್ವರ,<br>ಗೃಹ ಸಚಿವರು | 20–04–2016<br>ಬುಧವಾರ<br>ಬೆಳಿಗ್ಗೆ<br>8–30 ಗಂಟೆಗೆ | ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ,<br>ಬನ್ನೇರುಘಟ್ಟ ರಸ್ತೆ,<br>ಬೆಂಗಳೂರು – 560 029 |
| 2 | ಪ್ರಶಸ್ತಿ, ಬಹುಮಾನ ಪ್ರದಾನ ಸಮಾರಂಭ–2014 ಹಾಗೂ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ –2014<br><br>ಉದ್ಘಾಟನೆ:<br><br>ಶ್ರೀಮತಿ ಉಮಾಶ್ರೀ<br><br>ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು<br><br>ಯುವ ಬರಹಗಾರರಿಗೆ ಪ್ರೋತ್ಸಾಹಧನ ವಿತರಣೆ:<br><br>ಶ್ರೀಮತಿ ಶಕುಂತಲ ಶೆಟ್ಟಿ,<br>ಸಂಸದೀಯ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br><br>ಮುಖ್ಯ ಅತಿಥಿ:<br><br>ಶ್ರೀಮತಿ ಜಯಂತಿ,<br>ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ | 20–04–2016<br>ಬುಧವಾರ<br>ಸಂಜೆ<br>5–00<br>ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು |

| | | | |
|---|---|---|---|
| | **அ**ಧ್ಯಕ್ಷತೆ:<br><br>ಡಾ: ಬಂಜಗೆರೆ ಜಯಪ್ರಕಾಶ<br>ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯು 2015-16ನೇ ಸಾಲಿನಲ್ಲಿ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗಾಗಿ ಯಕ್ಷಗಾನ ಬಯಲಾಟದ ಸಂಶೋಧನಾ ಕ್ಷೇತ್ರ ಹಾಗೂ ಅಧ್ಯಯನ ವಿಷಯಗಳ ಬಗ್ಗೆ ಒಂಭತ್ತು ತಿಂಗಳ ಕಾಲ ಅಧ್ಯಯನಮಾಡಿ ಪ್ರಬಂಧ ಮಂಡಿಸುವವರಿಗೆ ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನಿಸಿದೆ.

ಈ ಸಂಶೋಧನಾ ಕಾರ್ಯದಲ್ಲಿ ಒಬ್ಬ ಸಂಶೋಧನಾ ಅಭ್ಯರ್ಥಿಗೆ 1.00 ಲಕ್ಷ ರೂ. ನಿಗದಿಪಡಿಸಲಾಗಿದೆ. ಆಸಕ್ತ ಕನ್ನಡ ಎಂ.ಎ., ಎಂ.ಫಿಲ್/ಪಿ.ಹೆಚ್.ಡಿ. ವ್ಯಾಸಂಗ ಮಾಡಿರುವವರು ಅಂಕಪಟ್ಟಿಯ ಪ್ರತಿ ಹಾಗೂ ಜಾತಿ ಪ್ರಮಾಣ ಪತ್ರದೊಂದಿಗೆ ಏಪ್ರಿಲ್ 30 ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, 2ನೇಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಬೆಂಗಳೂರು-2 ಅಥವಾ ಇಮೇಲ್ ವಿಳಾಸ kybabangalore@gmail.com. ಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಅಕಾಡೆಮಿ ಕಚೇರಿಯ ದೂರವಾಣಿ ಸಂಖ್ಯೆ 080 – 22113146 ಅನ್ನು ಸಂಪರ್ಕಿಸಬಹುದು.

ಮಮತಾಎಂ:ಪೂರ್ಣಿಮ:ಜಿಪಿಆರ್

# ವಿವಿಧ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಮೇ 22 ರ ಅಂತರರಾಷ್ಟ್ರೀಯ ಜೀವ ವೈವಿದ್ಯತಾ ದಿನಾಚರಣೆಯ ಅಂಗವಾಗಿ ಕರ್ನಾಟಕ ಜೀವವೈವಿದ್ಯ ಮಂಡಳಿಯು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಚರ್ಚಾಸ್ಪರ್ದೆ, ಪ್ರಬಂಧ, ಚಿತ್ರಕಲೆ, ರಸಪ್ರಶ್ನೆ ಸ್ಪರ್ಧೆಗಳನ್ನು ಏರ್ಪಡಿಸಿದೆ.

ಚರ್ಚಾ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಗೆ " ಜನರ ಸುಸ್ಥಿರತೆ ಹಾಗೂ ಅವರ ಜೀವನಾಧಾರ " ಎಂಬ ವಿಷಯವನ್ನು ನೀಡಲಾಗಿದ್ದು ಪಿಯುಸಿ/12ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ. "ನಮ್ಮ ರಾಜ್ಯದ ಜೀವವೈವಿದ್ಯತೆ" ಕುರಿತ ಚಿತ್ರಕಲೆಯಲ್ಲಿ 5 ನೇ ತರಗತಿಯ ಒಳಗಿನ ಮಕ್ಕಳು ಹಾಗೂ "ನಮ್ಮ ರಾಜ್ಯದ

ಜೀವವೈವಿಧ್ಯತೆ" ಕುರಿತ ರಸಪ್ರಶ್ನೆಯಲ್ಲಿ 8 ರಿಂದ 10ನೇ ತರಗತಿಯ ಒಳಗಿನ ವಿದ್ಯಾರ್ಥಿಗಳು ಭಾಗವಹಿಸಬಹುದು.

ಅರ್ಜಿ ನಮೂನೆ, ಸ್ಪರ್ಧೆಗಳು, ನಡೆಯುವ ಸ್ಥಳ ಹಾಗೂ ದಿನಾಂಕ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ, ನೆಲಮಹಡಿ "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003, ದೂರವಾಣಿ – 080 – 2344783 ಇ ಮೇಲ್, kbb.ka@nic.in, ವೆಬ್‌ಸೈಟ್ www.kbb.kar.nic.in ಅನ್ನು ಸಂಪರ್ಕಿಸಬಹುದು.

ಮಮತಾ:ಪೂರ್ಣಿಮ:ಜಿಪಿಆರ್

## ಮೆಟ್ರೋ ರೈಲು ಮಾರ್ಗಗಳು
## ಬಹುತೇಕ ಪೂರ್ಣಗೊಂಡಿದ್ದು ಶೀಘ್ರದಲ್ಲೇ ಉದ್ಘಾಟನೆ

– ಕೆ. ಜೆ. ಜಾರ್ಜ್

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ನಗರದ ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗಿನ 1200 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ರಸ್ತೆ ಮೇಲುಸೇತುವೆ ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್ಡು ಪೂರ್ಣಗೊಂಡಿದ್ದು, ಉಳಿದ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಭೇಟಿಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ನಗರದಲ್ಲಿ ಪ್ರಗತಿಯಲ್ಲಿರುವ ಪೂರ್ವ, ಪಶ್ಚಿಮ ಕಾರಿಡಾರ್ ಮೆಟ್ರೋ ರೈಲು ಕಾಮಗಾರಿಗಳು ಪೂರ್ಣಗೊಂಡಿದ್ದು ಸಧ್ಯದಲ್ಲೇ ಉದ್ಘಾಟನೆ ಮಾಡಲಾಗುವುದು ಎಂದರು.

ಬೈಯಪ್ಪನಹಳ್ಳಿಯಿಂದ ನಾಯಂಡಹಳ್ಳಿ, ಕನಕಪುರ ರಸ್ತೆಯಿಂದ ಬಸವನಗುಡಿಯ ನ್ಯಾಷನಲ್ ಕಾಲೇಜುವರೆಗಿನ ಮೆಟ್ರೋ ರೈಲು ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ ಎಂದ ಸಚಿವರು ಕೆಂಗೇರಿ–ಮಂಡ್ಯ, ತುಮಕೂರು–ಯಶವಂತಪುರ, ವೈಟ್‌ಫೀಲ್ಡ್ ನಿಂದ ಬೈಯಪ್ಪನಹಳ್ಳಿವರೆಗಿನ ಸಬ್‌ಅರ್ಬನ್ ರೈಲು ಮಾರ್ಗಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬದಲಿ ನಿವೇಶನ ಹಂಚಿಕೆ ವಿಷಯಕ್ಕೆ ಸಂಬಂಧಿಸಿದಂತೆ ನಿವೃತ್ತ ಐ.ಎ.ಎಸ್. ಅಧಿಕಾರಿ ಶಶಿಧರ್ ಸಮಿತಿ ನೀಡಿರುವ ವರದಿ ಆಧಾರದ ಮೇಲೆ ಸರ್ಕಾರ ಕ್ರಮಕೈಗೊಂಡಿದ್ದು, ಯಾವುದೇ ರೀತಿಯಲ್ಲೂ ಸರ್ಕಾರ ನಿಯಮ ಮೀರಿ ಕೆಲಸಮಾಡಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಕೆಪಿಪಿ:ಜಿಪಿಆರ್.

# ಪ್ರಯೋಗಾಲಯ ಕಾನೂನು ಬದ್ಧವಾಗಿದೆ

– ಶರಣಪ್ರಕಾಶ್ ಪಾಟೀಲ್

**ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)**

ನಗರದ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಖಾಸಗಿ ಸಂಸ್ಥೆ ಪ್ರಾರಂಭಿಸಿರುವ ಪ್ರಯೋಗಾಲಯದ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಲೋಪವಾಗಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಅವರು ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಭೇಟಿಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಪ್ರಯೋಗಾಲಯ ಪ್ರಾರಂಭಿಸುವ ಸಂಬಂಧ ನಾಲ್ಕು ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದವು. ಅಂತಿಮವಾಗಿ ಕಡಿಮೆ ದರ ನಮೂದು ಮಾಡಿದ ಸಂಸ್ಥೆಗೆ ಟೆಂಡರ್ ನೀಡಲಾಗಿದ್ದು, ಹಾಗಾಗಿ ಪ್ರಯೋಗಾಲಯ ಕಾನೂನು ಬದ್ಧವಾಗಿದೆ. ಈ ರೀತಿಯ ಪ್ರಯೋಗಾಲಯಗಳನ್ನು ಶಿವಮೊಗ್ಗ ಹಾಗೂ ಮೈಸೂರು ಆಸ್ಪತ್ರೆಗಳಲ್ಲಿ ಸ್ಥಾಪಿಸಲು ಹಿಂದಿನ ಸರ್ಕಾರ ಅನುಮತಿ ನೀಡಿದೆ ಎಂದರು.

ನೂತನ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸಂಬಂಧಿಸಿದಂತೆ ಈವರೆಗೂ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿಲ್ಲ ಎಂದರು.

ಕೆಪಿಪಿ:ಜಿಪಿಆರ್.